**ದಿನಾಂಕ - 09-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 3 ನೇ ಪ್ರತಿವಾದಿಯ ಪರ ಶ್ರೀ ಯು ಎಸ್ ಕೆ ವಕೀಲರಿಂದಃ**

7. ನೀವು 3 ನೇ ಪ್ರತಿವಾದಿ ಸಲ್ಲಿಸಿದ ಉದಾಹರಣೆಯನ್ನು ನೋಡಿ ಅನುಭವ ಮಾಡಿದ್ದೀರಾ ಎಂದರೆ ಸಾಕ್ಷಿ, ಯಾವುದು ಎಂದು ಪ್ರಶ್ನಿಸುತ್ತಿದ್ದಾರೆ. ನಿಪಿ.2 ಕರಾರಿನ ಪ್ರಕಾರ ದಾವಾ ಆಸ್ತಿಗಳು ಜಲಜಾಕ್ಷಿ ಹೆಗ್ಗಡ್ತಿ, ಗೋವಿಂದ ರಾಜ ಹೆಗ್ಗಡೆ ಹಾಗೂ 1 ಹಾಗೂ 2 ನೇ ಪ್ರತಿವಾದಿಯರ ನಡುವೆ ಹಂಚಿ ಹೋಗಿದೆ ಎಂದರೆ ಸರಿ. ಸದರಿಯವರು ಪ್ರತ್ಯೇಕವಾಗಿ ಸಂಪೂರ್ಣ ಹಕ್ಕಿನಿಂದ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು, 1 ಹಾಗೂ 2 ನೇ ಪ್ರತಿವಾದಿಗೆ ಜೀವಮಾನ ಕಾಲದಲ್ಲಿ ಮಾತ್ರ ಅನುಭವಿಸಲು ಹಕ್ಕು ಇದೆ ಹಾಗೂ ಮಾರಾಟ ಹಕ್ಕು ಇಲ್ಲ ಎನ್ನುತ್ತಾರೆ. ಸದರಿ ಕರಾರಿನಂತೆ ವಿಂಗಡಿಸಿದ ಆಸ್ತಿಯಲ್ಲಿ ಆಯಾ ಹಿಸ್ಸೆದಾರರಿಗೆ ಮಾತ್ರ ಹಕ್ಕು ಇತ್ತು ಹಾಗೂ ಉಳಿದ ಹಿಸ್ಸೆದಾರರಿಗೆ ಬೇರೆ ಕವರಿನ ಹಿಸ್ಸೆಯಲ್ಲಿ ಹಕ್ಕು ಇಲ್ಲ ಎಂದರೆ ಸಾಕ್ಷಿ, ನಿಸ್ಸಂತತಿ ಕವರಿನವರಿಗೆ ಕಾಲಾವಧಿ ತನಕ ಮಾತ್ರ ಹಕ್ಕು ಎನ್ನುತ್ತಾರೆ. ಆಯಾ ಹಿಸ್ಸೆದಾರರು ತಮ್ಮ ತಮ್ಮ ಹಿಸ್ಸೆಗಳಲ್ಲಿ ಕೃಷಿ ಚಟುವಟಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿಪಿ.2 ಕರಾರಿನಂತೆ ಕುಟುಂಬದವರು ತಮ್ಮ ತಮ್ಮ ಹಿಸ್ಸೆಯನ್ನು ಅನುಭವಿಸಿಕೊಂಡು ಬಂದಿರುತ್ತಾರೆ.

8. ಜಲಜಾಕ್ಷಿ ಹೆಗ್ಗಡ್ತಿಯವರ ಪಾಲಿಗೆ ಬಂದ ಆಸ್ತಿಗಳನ್ನು 1 ಹಾಗೂ 2 ನೇ ಪ್ರತಿವಾದಿಗಳು ಆಕೆಯ ಕಾಲಾನಂತರ ತಮ್ಮ ಪಾಲಿಗೆ ಪಹಣಿ ದಾಖಲೆ ಮಾಡಿಕೊಂಡು ಅದನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ, ಆಕೆಯ ಕಾಲಾನಂತರ ಸದರಿಯವರಿಗೆ ಆಸ್ತಿ ಬಂದಿತ್ತು. ಆದರೆ 1 ಮತ್ತು 2 ನೇ ಪ್ರತಿವಾದಿ ನಂತರ ನಮ್ಮ ಕುಟುಂಬಕ್ಕೆ ಆಸ್ತಿ ಬರಬೇಕು ಎನ್ನುತ್ತಾರೆ. ಪಹಣಿ ಪತ್ರಿಕೆ 1 ಮತ್ತು 2 ನೇ ಪ್ರತಿವಾದಿ ಹೆಸರಿಗೆ ಆಗಿದೆ ಎಂದರೆ ಸರಿ. ಆದರೆ ಅವರ ಕಾಲಾವಧಿ ತನಕ ಮಾತ್ರ ಹಕ್ಕು ಇರುತ್ತದೆ. ಸದರಿಯವರ ಹೆಸರಿಗೆ ಪಹಣಿ ಪತ್ರಿಕೆ ಆದ ಬಗ್ಗೆ ಆಕ್ಷೇಪಣೆ ಮಾಡಿದ್ದೀರಾ ಎಂದರೆ ಸಾಕ್ಷಿ, 1 ಮತ್ತು 2 ನೇ ಪ್ರತಿವಾದಿಯರು ಜೀವಂತ ಇರುವ ತನಕ ಮಾತ್ರ ನಮಗೆ ಆಕ್ಷೇಪಣೆ ಮಾಡಲು ಬರುವುದಿಲ್ಲ ಎನ್ನುತ್ತಾರೆ.

9. ದಾವಾ ಆಸ್ತಿಗಳನ್ನು ವಿಲೇವಾರಿ ಮಾಡಲು 1 ಹಾಗೂ 2 ನೇ ಪ್ರತಿವಾದಿಗೆ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿಯಲ್ಲ. ದಾವಾ 4 ನೇ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯರು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಸದರಿ ಮಾರಾಟ ಮಾಡಲು ಅವರಿಗೆ ಹಕ್ಕು ಇಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯ ಏಜೆಂಟರಾಗಿ 3 ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ.4 ಕ್ರಯ ದಸ್ತಾವೇಜು ನಮಗೆ ಬಂಧೀಕರಿಸುತ್ತದೆ ಎಂದರೆ ಸರಿಯಲ್ಲ.

10. ನಿಪಿ.2 ಕರಾರಿನ ಬಳಿಕ ನಾವು ವಾದಿಯರು ಯಾವುದೇ ಹಕ್ಕನ್ನು ಹೊಂದಿಲ್ಲ ಹಾಗೂ ಯಾವುದೇ ಹಕ್ಕನ್ನು ಈವರೆಗೂ ಚಲಾಯಿಸಿಲ್ಲ ಎಂದರೆ ಸರಿ. ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರ ಕಾಲಾವಧಿ ತನಕ ನಮಗೆ ಯಾವುದೇ ಹಕ್ಕು ಇಲ್ಲ ಎನ್ನುತ್ತಾರೆ. ಕಾಲ ಮಿತಿ ಮೀರಿ ನಮಗೆ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

11. ಈ ದಾವೆಯನ್ನು ನಾನು ಕುಸುಮಾವತಿ ಹೆಗ್ಗಡ್ತಿಯವರ ಶಾಖೆಯ ಪರವಾಗಿ ಸಲ್ಲಿಸಿದ್ದೇನೆ. ವೇದಾವತಿ ಹೆಗ್ಗಡ್ತಿ ಸದರಿ ಕುಸುಮಾವತಿಯ ಮಗಳು ಎಂದರೆ ಸರಿ. 3 ನೇ ಪ್ರತಿವಾದಿ ಸದರಿ ವೇದಾವತಿಯವರ ಮಗ ಎಂದರೆ ಸರಿ. ಆಕೆಗೆ 3 ನೇ ಪ್ರತಿವಾದಿ ಅಲ್ಲದೇ ಪ್ರಸಾದ್ ಎನ್ನುವ ಮಗ, ಹಾಗೂ ಪ್ರಮಿಳ ಮತ್ತು ಪ್ರಜ್ಞಾ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಸದರಿ ಪ್ರಮಿಳ ಮತ್ತು ಪ್ರಜ್ಞಾ ಇವರಿಗೆ ಕೂಡ ಹೆಣ್ಣು ಜನಿಸಿರುತ್ತಾರೆ. ನಾನು ವೇದಾವತಿ ಹೆಗ್ಗಡ್ತಿಯ ಕವರಿನ ಸದಸ್ಯರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

(ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮಧ್ಯಂತರ ಅರ್ಜಿ 10ರ ಷರತ್ತಿನ ಪ್ರಕಾರ ಅನುಮತಿ ನಿರಾಕರಿಸಲಾಗಿದೆ).

**ಪಾಟೀ ಸವಾಲು- ಪ್ರತಿವಾದಿ ನಂಬ್ರ 4 ಮತ್ತು 5 ರವರ ಪರ ಶ್ರೀ ಕೆ.ಆರ್.ಎ ವಕೀಲರಿಂದಃ**

12. ದಾವಾ ಆಸ್ತಿಗಳು ಪ್ರಸ್ತುತ ವಾದಿಯರ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿ. ಎಲ್ಲಾ ಸ್ವತ್ತುಗಳು ಮೂಲಗೇಣಿ ಒಕ್ಕಲುಗಳ ಸ್ವಾಧೀನಲ್ಲಿ ಇದೆ ಎಂದರೆ ಸಾಕ್ಷಿ ಕೆಲವು ಆಸ್ತಿಗಳು ಮಾತ್ರ ಇದೆ ಎನ್ನುತ್ತಾರೆ. ನನಗೆ ಯಾವ ಸ್ವತ್ತುಗಳು ಮೂಲಗೇಣಿ ಒಕ್ಕಲುಗಳ ಬಳಿ ಇದೆ ಹಾಗೂ ಯಾವ ಆಸ್ತಿ ಇಲ್ಲ ಎಂದು ಹೇಳಲು ಬರುವುದಿಲ್ಲ.

13. ಎಷ್ಟು ಸ್ವತ್ತುಗಳ ಕುರಿತಾಗಿ ಈ ದಾವೆ ಸಲ್ಲಿಸಿದ್ದೇನೆ ಎಂದು ಹೇಳಲು ಬರುವುದಿಲ್ಲ. ಅವುಗಳ ಚತುರ್ಗಡಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಸರ್ವೆ ನಂಬರಿನ ಅಂಶದ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳ ಎಫ್.ಎಂ.ಬಿ ನಕಲನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ. ದಾವಾ ಆಸ್ತಿಗಳು 1 ಹಾಗೂ 2 ನೇ ಪ್ರತಿವಾದಿಯರ ಹೆಸರಿನಲ್ಲಿ ದಾಖಲು ಇರುತ್ತದೆ.

14. ದಾವಾ 4 ನೇ ಆಸ್ತಿ ಪ್ರಸ್ತುತ 4 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸಾಕ್ಷಿ ಫೋರ್ಜರಿ ದಾಖಲೆ ಮೂಲಕ ನಮೂದಾಗಿದೆ ಎನ್ನುತ್ತಾರೆ. ದಾವಾ 8 ಮತ್ತು 9 ನೇ ಆಸ್ತಿಗಳು 5 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸಾಕ್ಷಿ ಇದು ಕೂಡ ಫೋರ್ಜರಿ ದಾಖಲೆ ಮೂಲಕ ನಮೂದಾಗಿದೆ ಎನ್ನುತ್ತಾರೆ. ಈ ಬಗ್ಗೆ ನಾವು ಕಂದಾಯ ಮೇಲ್ಮನವಿ ಸಲ್ಲಿಸಿದ್ದೆವು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

15. ದಾವಾ 9 ಆಸ್ತಿಗಳಲ್ಲಿ ಒಟ್ಟು ಎಷ್ಟು ಮನೆಗಳು ಇವೆ ಎಂದು ಗೊತ್ತಿಲ್ಲ. ನಾನು ಲೆಕ್ಕ ಮಾಡಲು ಹೋಗಿಲ್ಲ. ದಾವಾ ಆಸ್ತಿಗಳಲ್ಲಿ ಮನೆ ಹೊರತುಪಡಿಸಿ ಬೇರೆ ಏನು ಕೃತಗಳು ಇವೆ ಎಂದು ನನಗೆ ಗೊತ್ತಿಲ್ಲ.

16. ನಿಪಿ.2 ರ ಪ್ರಕಾರ ದಾವಾ ಆಸ್ತಿಗಳು ಕೃಷ್ಣಮ್ಮ ಹೆಗ್ಗಡ್ತಿಯವರ ಕವರಿಗೆ ಬಂದಿರುತ್ತದೆ. ಕೃಷ್ಣಮ್ಮ ಹೆಗ್ಗಡ್ತಿಗೆ ಐದು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಜನಿಸಿರುತ್ತಾರೆ. ಆಕೆಯ

ಹೆಣ್ಣು ಮಕ್ಕಳ ಹೆಸರು ಕುಸುಮಾವತಿ, ಇಂದಿರಾ, ಸುಗುಣ, ಶಾಂತಾ, ಸರಸ್ವತಿ ಹಾಗೂ ಮಗನ ಹೆಸರು ದಾಸಪ್ಪ ಹೆಗ್ಗಡೆ ಇರುತ್ತದೆ. ಜಲಜಾಕ್ಷಿ ಹೆಗ್ಗಡ್ತಿಗೆ ಗೋವಿಂದರಾಜ ಹೆಗ್ಗಡೆ ಹಾಗೂ ಲೀಲಾವತಿ ಎನ್ನುವ ಮಕ್ಕಳು ಇದ್ದರು. ಗೋವಿಂದರಾಜ ಹೆಗ್ಗಡೆ ಅಂದಾಜು 1979 ರಲ್ಲಿ ಮೃತಪಟ್ಟಿರುತ್ತಾರೆ. ಲೀಲಾವತಿ ಹೆಗ್ಗಡ್ತಿಗೆ 1 ಮತ್ತು 2 ನೇ ಪ್ರತಿವಾದಿಯರು ಗಂಡು ಮಕ್ಕಳು ಜನಿಸಿರುತ್ತಾರೆ.

17. ನಿಪಿ.2 ರ ಪ್ರಕಾರ ವಿಂಗಡಿಸಿದ ಆಸ್ತಿಗಳನ್ನು ಆಯಾ ಆಯಾ ಕವರಿನವರು ತಮ್ಮ ಹಿಸ್ಸೆ ಪ್ರಕಾರ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಕುಸುಮಾವತಿ ಹೆಗ್ಗಡ್ತಿಯವರು ಹಾಗೂ ಇನ್ನುಳಿದ ಕವರಿನವರು ಪ್ರತ್ಯೇಕ ಪ್ರತ್ಯೇಕವಾಗಿ ಸ್ವಾಧೀನಾನುಭವ ಹೊಂದಿದ್ದರು ಎಂದರೆ ಸಾಕ್ಷಿ, 1946 ರ ತನಕ ಪ್ರತ್ಯೇಕವಾಗಿ ಸ್ವಾಧೀನ ಹೊಂದಿದ್ದರು ಎನ್ನುತ್ತಾರೆ. ಈ ದಾವೆ ಸಲ್ಲಿಸುವ ಸಮಯ ಪ್ರತಿವಾದಿ 1 ಮತ್ತು 2 ರವರು ಜೀವಂತ ಇದ್ದರು ಎಂದರೆ ಸರಿ. ನಿಪಿ.2 ರ ಪ್ರಕಾರ ಸ್ವಾಧೀನ ಹೊಂದಿದ್ದ ಪ್ರತಿವಾದಿ 1 ಮತ್ತು 2 ರವರು ಪಹಣಿ ಪತ್ರಿಕೆಯಲ್ಲಿ ತಮ್ಮ ಹೆಸರನ್ನು ನಮೂದಿಸಿಕೊಂಡು ತಮ್ಮ ಪಾಲಿನ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ, ಫೋರ್ಜರಿ ಮಾಡಿ ದಾಖಲೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ನಾನು ಈ ಸಾಕ್ಷ್ಯವನ್ನು ವಾದಿಯರ ಪರವಾಗಿ ಮಾತ್ರ ನುಡಿಯುತ್ತಿದ್ದೇನೆ. 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ನುಡಿಯುತ್ತಿಲ್ಲ. ಫೋರ್ಜರಿ ಮಾಡಿ ಮಾರಾಟ ಮಾಡಲಾಗಿದೆ ಎಂದು ನನಗೆ 1 ಮತ್ತು 2 ನೇ ಪ್ರತಿವಾದಿಯರೇ ತಿಳಿಸಿದ್ದಾರೆ. ನನಗೆ 2018 ರ ನಂತರ ಈ ವಿಷಯ ಗೊತ್ತಾಯಿತು. ಈ ಬಗ್ಗೆ ನಾವಾಗಲಿ ಅಥವಾ 1 ಮತ್ತು 2 ನೇ ಪ್ರತಿವಾದಿಯರಾಗಲಿ ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ. ನನ್ನ ಪ್ರಕಾರ 3 ನೇ ಪ್ರತಿವಾದಿಯೂ 1 ಮತ್ತು 2 ನೇ ಪ್ರತಿವಾದಿಯರ ಸಹಿಗಳನ್ನು ಫೋರ್ಜರಿ ಮಾಡಿರುತ್ತಾನೆ ಮತ್ತು ದಾವಾ ಆಸ್ತಿಗಳನ್ನು ತನ್ನ ಹೆಸರಿಗೆ ಬರೆಸಿಕೊಂಡಿರುತ್ತಾನೆ.

18. ನನ್ನ ಪ್ರಕಾರ ನಿಪಿ.3 ಹಾಗೂ 4 ದಾಖಲೆಗಳನ್ನು ಫೋರ್ಜರಿ ಎಂದು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ, ದಾಖಲೆಗಳನ್ನು ನೋಡಿ ನನಗೆ ಸರಿಯಾಗಿ ಹೇಳಲು ಬರುವುದಿಲ್ಲ ಎನ್ನುತ್ತಾರೆ. ಸದರಿ ದಾಖಲೆಗಳನ್ನು ಓದಿ ನೋಡಿ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ, ನನ್ನ ತಮ್ಮ/ವಕೀಲರಾದ ಪ್ರಭಾಕರ ಹೆಗ್ಗಡೆ ರವರ ಮುಖಾಂತರ ಅನುಭವ ಮಾಡಿಕೊಂಡಿದ್ದೆ ಎನ್ನುತ್ತಾರೆ. ನನಗೆ ನಿಪಿ.3 ಮತ್ತು 4 ದಾಖಲೆಗಳ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ.3 ಮತ್ತು 4 ಯಾವ ದಾಖಲೆಗಳ ಆಧಾರದಲ್ಲಿ ಅಸ್ತಿತ್ವಕ್ಕೆ ಬಂದಿದೆ ಎಂದರೆ ಸಾಕ್ಷಿ ನಿಪಿ.5 ಕರಾರಿನ ಪ್ರಕಾರ ನಮ್ಮ ಪಾಲಿಗೆ ಆಸ್ತಿ ಬಂದಿದೆ ಎನ್ನುತ್ತಾರೆ. ನಿಪಿ.3 ಮತ್ತು 4 ದಾಖಲೆಗಳು 3 ನೇ ಪ್ರತಿವಾದಿಯ ಪರವಾಗಿ 1 ಮತ್ತು 2 ನೇ ಪ್ರತಿವಾದಿಯರು ಬರೆದುಕೊಟ್ಟ ಜಿ.ಪಿ.ಎ ಆಧಾರದಲ್ಲಿ ಅಸ್ತಿತ್ವಕ್ಕೆ ಬಂದಿದೆ ಎಂದರೆ ಸಾಕ್ಷಿ

ಜಿ.ಪಿ.ಎ.,ಯೇ ಫೋರ್ಜರಿ ದಾಖಲೆ ಎನ್ನುತ್ತಾರೆ. ಸದರಿ ಜಿ.ಪಿ.ಎ.,ಯನ್ನು ಪ್ರಶ್ನಿಸಿರುತ್ತೇವೆ ಯಾವಾಗ ಎಂದು ನೆನಪಿಲ್ಲ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ಜಿ.ಪಿ.ಎ., ಆಧಾರದಲ್ಲಿ 3 ನೇ ಪ್ರತಿವಾದಿ ನ್ಯಾಯ ಸಮ್ಮತವಾಗಿ ದಾವಾ ಆಸ್ತಿ ನಂಬ್ರ.4, 8, 9 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

19. ನಾನು ಎಲ್ಲಾ ವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನಾನು 3 ರಿಂದ 5 ನೇ ಪ್ರತಿವಾದಿಯರು ಸಲ್ಲಿಸಿದ ಉದಾಹರಣೆಯನ್ನು ಓದಿ ನೋಡಿಲ್ಲ. ಹಾಗಾಗಿ ಸದರಿ ಉದಾಹರಣೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಹೇಳಲು ಸಾಧ್ಯವಿಲ್ಲ. ನಮ್ಮ ವಕೀಲರಿಗೆ ಗೊತ್ತು. 3 ನೇ ಪ್ರತಿವಾದಿಯ ಪರವಾಗಿ ಬರೆದುಕೊಟ್ಟ ಜಿ.ಪಿ.ಎ., ಯನ್ನು ನೋಡಿದ್ದೀರಾ ಎಂದರೆ ನನೆಗ ನೆನಪಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ನೋಟರಿಯವರಾದ ಎಂ. ರಾಮಚಂದ್ರ ಇವರ ಸಮಕ್ಷಮ 3 ನೇ ಪ್ರತಿವಾದಿಯ ಪರವಾಗಿ ಜಿ.ಪಿ.ಎ., ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

20. ದಾವಾ ಆಸ್ತಿಗೆ ಸಂಬಂದಿಸಿದಂತೆ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ನನಗೆ ನೆನಪಿಲ್ಲ. ಲೋಕನಾಥ ಶೆಟ್ಟಿ ಎನ್ನುವವರು ಇಂದಿರಾ ಹೆಗ್ಗಡ್ತಿಯವರ ಮಗ. ಆತ ನನ್ನ ಚಿಕ್ಕಮ್ಮನ ಮಗ. ಸದರಿ ಲೋಕನಾಥ ಶೆಟ್ಟಿ ಮಾರಾಟ ಮಾಡಿದ ಆಸ್ತಿಗಳ ಬಗ್ಗೆ ದಾವೆ ದಾಖಲಾದದ್ದು ನನಗೆ ಗೊತ್ತಿಲ್ಲ. ಸದರಿಯವರ ತಾಯಿಗೆ ನಿಪಿ.2 ರ ಪ್ರಕಾರವೇ ಆಸ್ತಿಯಲ್ಲಿ ಪಾಲು ಬಂದಿದೆ ಎಂದರೆ ಸರಿ. ಸದರಿ ನಿಪಿ.2 ರ ಪ್ರಕಾರ ಬಂದ ಆಸ್ತಿಯೇನ್ನೇ ಲೋಕನಾಥ ಶೆಟ್ಟಿ ಮಾರಾಟ ಮಾಡಿದ್ದರು ಎಂದರೆ ಇರಬಹುದು. ಅದಕ್ಕೆ ಮತ್ತು ಈ ಪ್ರಕರಣಕ್ಕೆ ಸಂಬಂದ ಇಲ್ಲ.

21. ಪ್ರತಿವಾದಿ ನಂಬ್ರ 1 ಮತ್ತು 2 ರವರು ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಿಗೆ ಮಾರಾಟ ಮಾಡಲು ಹಕ್ಕು ಇರುವುದಿಲ್ಲ. ನಮಗೆ ದಾವಾ ಆಸ್ತಿಗಳಲ್ಲಿ ನಮ್ಮ ತಾಯಿಯಿಂದ ಹಕ್ಕು ಬಂದಿದೆ. ಮೂಲಗೇಣಿ ಯಾ ಚಾಲಗೇಣಿ ಹಕ್ಕು ಬಂದಿರಬಹುದು. ಈ ದಾವೆಯಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದವರೆಲ್ಲರನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ನಾವು ಯಾಕೆ ಮಾಡಬೇಕು ಎನ್ನುತ್ತಾರೆ. ವೇದಾವತಿ ಮತ್ತು ಕುಸುಮಾವತಿಯವರ ಕವರಿನವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

22. ನಿಮ್ಮ ಪ್ರಕಾರ ನಿಪಿ.2 ವಿಭಾಗ ಪತ್ರವೇ ಅಥವಾ ವ್ಯವಸ್ಥೆಯೇ ಎಂದರೆ ಸಾಕ್ಷಿ, ವಿಭಾಗ ಪತ್ರ ಎನ್ನುತ್ತಾರೆ. ಪ್ರತಿವಾದಿ 3 ರಿಂದ 5 ರವರಿಗೆ ತೊಂದರೆ ನೀಡಲು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲಿಲಸಲು ನಮಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.